ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು
C.C. No.3435/2023.

ದಿನಾಂಕ:**19.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು:- ಆರೋಪಿ ಪರ ಎನ್ ಜಿ ಓ ವಕೀಲರಿಂದ:-

ನಾನು ಬೆಂಗಳೂರಿನಿಂದ ಕಡೂರಿಗೆ ಬ್ಯಾಂಕ್ ಖಾತೆಯನ್ನು ವರ್ಗಾವಣೆ ಮಾಡಿಕೊಂಡ ಸಂಬಂಧವಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಖಾತೆಯು ಬೆಂಗಳೂರಿನಲ್ಲಿ ಇದ್ದು ಸದರಿ ಬ್ಯಾಂಕ್ ಖಾತೆಯನ್ನು ನಾನು ವರ್ಗಾವಣೆ ಮಾಡಿಕೊಂಡು ಕಡೂರಿನಲ್ಲಿ ಚೆಕ್ ಅನ್ನು ಹಾಜರುಪಡಿಸಿದ್ದೆ ಎಂದು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ನನ್ನ ದೂರಿನ 5 ನೇ ಪ್ಯಾರಾದ 2 ನೇ ಸಾಲಿನಲ್ಲಿ ನಾನು 3 ಚೆಕ್ ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸರ್ಜಾಪುರ ರಸ್ತೆ ಬೆಂಗಳೂರು ಎಂದು ನಮೂದು ಮಾಡಿದ್ದು ನಾನು ಸದರಿ ಬ್ಯಾಂಕಿನಲ್ಲಿಯೇ ಚೆಕ್ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಖಾತೆ ಹಾಗೂ ನನ್ನ ಬ್ಯಾಂಕ್ ಖಾತೆಯು ಬೆಂಗಳೂರಿನ ಸರ್ಜಾಪುರ ರಸ್ತೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿಯೇ ಇರುವುದರಿಂದ ಈ ನ್ಯಾಯಾಲಯದ ಕೇಸು ದಾಖಲು ಮಾಡಿರುವುದು ತಪ್ಪು ಎಂದರೆ ಸರಿಯಲ್ಲ.

ಬೃಂದ ಟೂರ್ಸ್ ಅಂಡ್ ಟ್ರಾವೆಲ್ಸ್‌ನಲ್ಲಿ ನಾನು ಒಂದು ವಾಹನವನ್ನು ಖರೀದಿಸಿದ್ದು ಸದರಿ ವಾಹನದ ಮೊತ್ತವನ್ನು 36 ಕಂತುಗಳಲ್ಲಿ ನಾನೇ ಪಾವತಿಸುತ್ತೇನೆ ಎಂದು ಕರಾರು ಮಾಡಿಕೊಂಡಿರುತ್ತೇನೆ. ಸದರಿ ವಾಹನವನ್ನು 2017 ರ ಆಗಸ್ಟ್ ನಲ್ಲಿ ಖರೀದಿಸಿರುತ್ತೇನೆ. ಸದರಿ ಕರಾರು ಪತ್ರದಲ್ಲಿ ಹೇಳಿರುವಂತೆ 12.03.2019 ರಂದು ನಾನು ವಾಹನ ಖರೀದಿಸಿರುತ್ತೇನೆ ಎಂದರೆ ಸಾಕ್ಷಿಯು ಅದು ಕೇವಲ ಕರಾರು ಪತ್ರನ್ನು ಮಾಡಿಕೊಟ್ಟ ದಿನಾಂಕವಾಗಿದೆ ಎಂದು ನುಡಿಯುತ್ತಾರೆ. ನಾನು ದಿ:01.08.2017 ರಂದು ವಾಹನ ಖರೀದಿಸಿರುತ್ತೇನೆ ಎಂದರೆ ಸರಿ. ವಾಹನ ಖರೀದಿಸಿದ ದಿನದಿಂದ 36 ಕಂತುಗಳು

ಎಂದರೆ ಅದರ ಅಂತಿಮ ಅವಧಿಯ ದಿನಾಂಕ 01.08.2020 ಕ್ಕೆ ಮುಕ್ತಾಯವಾಗುತ್ತದೆ ಎಂದರೆ ಸರಿ. ಸದರಿ EMI ಅನ್ನು ಹೇಗೆ ಪಾವತಿ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ನಾನು ವಾಹನವನ್ನು ಖರೀದಿ ಮಾಡಿ ಬೃಂದ ಟೂರ್ಸ್ ಆಂಡ್ ಟ್ರಾವೆಲ್ಸ್‌ಗೆ ಬಿಟ್ಟುಕೊಟ್ಟಿದ್ದು ಅವರು ಸದರಿ ವಾಹನದಿಂದ ಕೆಲಸ ಮಾಡಿಸಿಕೊಂಡು EMI ಅನ್ನು ಅವರೆ ಕಟ್ಟಿಕೊಂಡು ಉಳಿದ ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು 2019 ರ ಡಿಸೆಂಬರ್ ನಲ್ಲಿ ನನ್ನ ವಾಹನವನ್ನು ಬೃಂದ ಟೂರ್ಸ್ ಆಂಡ್ ಟ್ರಾವೆಲ್ಸ್ ನಿಂದ ಹಿಂಪಡೆದುಕೊಂಡಿರುತ್ತೇನೆ. 2019 ರ ಡಿಸೆಂಬರ್ ನ ನಂತರ ನಾನು ಹೇಗೆ EMI ಪಾವತಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ವಾಹನವನ್ನು ಹಿಂಪಡೆಯುವಾಗ ನನ್ನ ಉಳಿದ ಎಲ್ಲಾ EMI ಗಳನ್ನು ಕಡಿತಗೊಳಿಸಿಕೊಂಡು ನಂತರದಲ್ಲಿ ನನಗೆ ವಾಹನವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.  2019 ರ ಡಿಸೆಂಬರ್ ನ ನಂತರ ನಾನು ವಾಹನದ EMI ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. 2019 ರ ಡಿಸೆಂಬರ್ ನಲ್ಲಿ ವಾಹನ ಹಿಂಪಡೆದುಕೊಂಡು ಅಂತಿಮ ಸೆಟಲ್‌ಮೆಂಟ್ ಮಾಡಿಕೊಂಡಿರುವ ಬಗ್ಗೆ ಯಾವುದೇ ಕರಾರು/ದಾಖಲೆ ಪತ್ರ ಮಾಡಿಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಬೃಂದ ಟೂರ್ಸ್ ಆಂಡ್ ಟ್ರಾವೆಲ್ಸ್ ರವರು ಹಣ ಕಡಿತಗೊಳಿಸಿಕೊಂಡು ನನ್ನ ಹೆಸರಿಗೆ ಆರ್ ಸಿ ವರ್ಗಾವಣೆ ಮಾಡಿಕೊಳ್ಳಲು ಒಪ್ಪಿ ಫಾರ್ಮ್ ನಂ.29, 30 ಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 29 ಮತ್ತು 30 ಫಾರ್ಮ್ ಗಳು ಈಗ ನನ್ನ ಬಳಿ ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಕೆಎ 51 ಎ ಎ 4170 ರ ವಾಹನ ಈಗ ಯಾವ ಸ್ಥಿತಿಯಲ್ಲಿ ಇದೆ ಎಂದರೆ ಸಾಕ್ಷಿಯು ಅದನ್ನು ನಾನು ನನ್ನ ಮನೆಯಲ್ಲಿ ನಿಲ್ಲಿಸಿಕೊಂಡಿರುತ್ತೇನೆ. ಸದರಿ ವಾಹನಕ್ಕೆ ಈಗ ನಂಬರ್ ಪ್ಲೇಟ್ ಇರುವುದಿಲ್ಲ. ಸದರಿ ವಾಹನಕ್ಕೆ ವಿಮೆ ಇರುವುದಿಲ್ಲ. ನಾನು 2020 ರಿಂದ ಈ ವರೆಗೂ ಅದನ್ನು ಹಾಗೆಯೇ ನಿಲ್ಲಿಸಿರುತ್ತೇನೆ. ಕರಾರು ಪತ್ರದಲ್ಲಿ ವಾಹನಕ್ಕೆ ಸಂಬಂಧಪಟ್ಟ ವಿಮೆ ಅನ್ನು ನಾನೇ ಮಾಡಿಸಿಕೊಳ್ಳುತ್ತೇನೆ ಎಂದು ಷರತ್ತು ಇದೆ ಎಂದರೆ ಸರಿ. ನಾನು ಸದರಿ ವಾಹನಕ್ಕೆ ಸಂಬಂಧಪಟ್ಟ 8 ಕಂತುಗಳನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಫಾರ್ಮ್ ನಂ.29 ಮತ್ತು 30 ಗಳನ್ನು ನಾನು ಮುಂದಿನ

ಸುನಾವಣಾ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿರುವುದರಿಂದಲೂ ಹಾಗೂ ಸಾಕ್ಷಿಯು ಮುಂದಿನ ದಿನಾಂಕದಂದು ದಾಖಲೆ ಹಾಜರುಪಡಿಸಲು ಒಪ್ಪಿಕೊಂಡಿರುವುದರಿಂದಲೂ ಪಾಟೀ ಸವಾಲಿಗೆ ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.